# ಕೇಂದ್ರ ಪರಿಹಾರ ಸಮಿತಿ ಹಾಗೂ ನಿರಾಶ್ರಿತರ ಪರಿಹಾರ ಕೇಂದ್ರಗಳ 2016-17 ನೇ ಸಾಲಿನ ಆಡಳಿತ ವರದಿ

----------

**ಪೀಠಿಕೆ:-**

ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ಭಿಕ್ಷಾಟನಾ ನಿಷೇಧ ಅಧಿನಿಯಮ 1975 ಜಾರಿಯಲ್ಲಿದ್ದು, ಭಿಕ್ಷಾಟನೆಯನ್ನು ನಿಷೇಧಿಸಲಾಗಿದೆ. ಭಿಕ್ಷಾಟನೆಯಲ್ಲಿ ನಿರತರಾದ ವ್ಯಕ್ತಿಗಳನ್ನು ಕಾಯ್ದೆಯಡಿ ಬಂಧಿಸಿ, ನಿಯಮಾನುಸಾರ ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿರಿಸಿ ಪುನರ್ವಸತಿ ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕರ್ನಾಟಕ ಭಿಕ್ಷಾಟನಾ ನಿಷೇಧ ಕಾಯ್ದೆ 1975 ಸೆಕ್ಷನ್(31) ರನ್ವಯ ಸ್ಥಳೀಯ ಸಂಸ್ಥೆಗಳು ಭೂಮಿ ಮತ್ತು ಕಟ್ಟಡಗಳ ಮೇಲೆ ವಿಧಿಸುವ ತೆರಿಗೆಗಳಲ್ಲಿ 3% ಭಿಕ್ಷುಕರ ಉಪಕರ ಸಂಗ್ರಹಿಸಿ ಪಾವತಿಸುವ ಹಣದಿಂದ ಈ ಸಂಸ್ಥೆಗಳ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸಲಾಗುತ್ತದೆ.

**ಆಡಳಿತ ವ್ಯವಸ್ಥೆ:**

**ರಾಜ್ಯಮಟ್ಟ-ಕೇಂದ್ರ ಪರಿಹಾರ ಸಮಿತಿ:-**

ಕರ್ನಾಟಕ ಭಿಕ್ಷಾಟನಾ ನಿಷೇಧ ಅಧಿನಿಯಮ 1975 ರ ಸೆಕ್ಷನ್ (4) ರನ್ವಯ ಕೇಂದ್ರ ಪರಿಹಾರ ಸಮಿತಿಯು ರಚಿತವಾಗಿದ್ದು, ಸಮಿತಿಯಲ್ಲಿ 3 ಅಧಿಕಾರಿ ಸದಸ್ಯರು ಹಾಗೂ 4 ಅಧಿಕಾರೇತರ ಸದಸ್ಯರನ್ನು ಸರ್ಕಾರದಿಂದ ನೇಮಕ ಮಾಡಲಾಗುತ್ತದೆ. ಈ ಸದಸ್ಯರ ಪೈಕಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಸರ್ಕಾರವು ನೇಮಿಸುತ್ತದೆ. ಪ್ರಸ್ತುತ ಶ್ರೀ ಎ.ಮಾನಯ್ಯ, ಬಳ್ಳಾರಿ ಇವರನ್ನು ಕೇಂದ್ರ ಪರಿಹಾರ ಸಮಿತಿಯ ಅಧ್ಯಕ್ಷರನ್ನಾಗಿ, ಹಾಗೂ ಶ್ರೀಯುತರಾದ ರುಕ್ಮಿಣಿ ವಿಠ್ಠಲ ರಾಠೋಡ್, ಸುಜಾತ ವಾಸುದೇವ್, ಮಕ್ತುಮಹಸೇನ ಮದಾರಸಾಬ ಸಾವುಕಾರ್, ಮತ್ತು ಮಾಯಗಯ್ಯ, ರವರುಗಳನ್ನು ಸದಸ್ಯರನ್ನಾಗಿ ಸರ್ಕಾರವು ನೇಮಕ ಮಾಡಿದೆ. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, & ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಇವರುಗಳು ಕೇಂದ್ರ ಪರಿಹಾರ ಸಮಿತಿಯ ಅಧಿಕಾರಿ ಸದಸ್ಯರಾಗಿರುತ್ತಾರೆ. ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು, ನಿಯೋಜನೆ ಮೇರೆಗೆ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಜಿಲ್ಲಾ ಮಟ್ಟ-ಸ್ಥಳೀಯ ಪರಿಹಾರ ಸಮಿತಿಗಳು:-**

14 ನಿರಾಶ್ರಿತರ ಪರಿಹಾರ ಕೇಂದ್ರಗಳು 14 ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಕೇಂದ್ರ ಪರಿಹಾರ ಸಮಿತಿಯು ಆಯಾ ಜಿಲ್ಲೆಯ ಸ್ಥಳೀಯ ಆಡಳಿತ ನಿರ್ವಹಣೆಗಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮತ್ತು 11 ಅಧಿಕಾರಿ ಸದಸ್ಯರನ್ನೊಳಗೊಂಡು ಸ್ಥಳೀಯ ಪರಿಹಾರ ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗೆ ಜಂಟಿ/ಉಪ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ರವರು ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ಬೆಂಗಳೂರು ನಿರಾಶ್ರಿತರ ಪರಿಹಾರ ಕೇಂದ್ರದಲ್ಲಿ ಗ್ರೂಪ್ "ಎ" ಕಿರಿಯ

ಶ್ರೇಣಿಯ ಅಧೀಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಉಳಿದ 13 ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ ಗ್ರೂಪ್-ಬಿ ಶ್ರೇಣಿಯ ಅಧಿಕಾರಿಗಳು ಅಧೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕರ್ನಾಟಕ ಭಿಕ್ಷಾಟನಾ ನಿಷೇಧ ನಿಯಮಗಳು 1975 ರಲ್ಲಿ ಕೇಂದ್ರ ಪರಿಹಾರ ಸಮಿತಿಗೆ ಆರ್ಥಿಕ ಅಧಿಕಾರಗಳನ್ನು ನಿಗಧಿಪಡಿಸಲಾಗಿದ್ದು, ಇದರೊಂದಿಗೆ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಸರ್ಕಾರದ ಆದೇಶಗಳನ್ವಯ ಆಡಳಿತವನ್ನು ನಡೆಸಲಾಗುತ್ತದೆ.

## ಸಿಬ್ಬಂಧಿ ವಿವರಗಳು:-

ಕೇಂದ್ರ ಪರಿಹಾರ ಸಮಿತಿ ಕಛೇರಿ ಹಾಗೂ ಇದರ ಆಡಳಿತ ವ್ಯಾಪ್ತಿಗೊಳಪಡುವ ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ ಮಂಜೂರಾದ/ಭರ್ತಿಯಾದ/ಖಾಲಿಯಾಗಿರುವ ಹುದ್ದೆಗಳ ವಿವರ ಈ ಕೆಳಕಂಡಂತಿರುತ್ತದೆ.

| ಕ್ರ.ಸಂ | ವೃಂದ | ಮಂಜೂರಾದ ಹುದ್ದೆಗಳು | ಭರ್ತಿಯಾದ ಹುದ್ದೆಗಳು | ಖಾಲಿ ಇರುವ ಹುದ್ದೆಗಳು |
|---|---|---|---|---|
| 1 | ಗ್ರೂಪ್-ಎ | 03 | 1 | 02 |
| 2 | ಗ್ರೂಪ್-ಬಿ | 16 | 02 | 14 |
| 3 | ಗ್ರೂಪ್-ಸಿ | 82 | 29 | 53 |
| 4 | ಗ್ರೂಪ್-ಡಿ | 184 | 38 | 146 |
| | ಒಟ್ಟು | 285 | 70 | 215 |

**ನಿರಾಶ್ರಿತರ ಪರಿಹಾರ ಕೇಂದ್ರಗಳು:-**

ರಾಜ್ಯದ ಬೆಂಗಳೂರು, ಬಳ್ಳಾರಿ, ಬೆಳಗಾವಿ, ಚಿತ್ರದುರ್ಗ, ದಾವಣಗೆರೆ, ಹುಬ್ಬಳ್ಳಿ-ಧಾರವಾಡ, ಕೋಲಾರ, ಕಲ್ಬುರ್ಗಿ, ಮೈಸೂರು, ದಕ್ಷಿಣ ಕನ್ನಡ, ರಾಯಚೂರು, ಶಿವಮೊಗ್ಗ, ತುಮಕೂರು ಮತ್ತು ವಿಜಯಪುರ ಜಿಲ್ಲೆಗಳಲ್ಲಿ 14 ನಿರಾಶ್ರಿತರ ಪರಿಹಾರ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಹೊಸದಾಗಿ ಭಿಕ್ಷುಕರ ಪುನರ್ವಸತಿ ಕೇಂದ್ರಗಳನ್ನು ಪ್ರಾರಂಭಿಸಲು ಚಾಮರಾಜನಗರ ಜಿಲ್ಲೆಯಲ್ಲಿ 5.05ಎಕರೆ ಸರ್ಕಾರಿ ಜಮೀನನ್ನು ಮತ್ತು ಹಾಸನ ಜಿಲ್ಲೆಯಲ್ಲಿ 5.00 ಎಕರೆ ಸರ್ಕಾರಿ ಜಮೀನನ್ನು ಮಂಜೂರು ಮಾಡಲಾಗಿದೆ.

**ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ ನಿರಾಶ್ರಿತರಿಗೆ ಒದಗಿಸಲಾಗುತ್ತಿರುವ ಸೌಲಭ್ಯಗಳು:-**

- ನಿರಾಶ್ರಿತರ ಪರಿಹಾರ ಕೇಂದ್ರದ ನಿರಾಶ್ರಿತರಿಗೆ ಪ್ರತಿದಿನ ಬೆಳಗಿನ ಉಪಹಾರ, ಮದ್ಯಾಹ್ನ ಮತ್ತು ರಾತ್ರಿ ಊಟಗಳನ್ನು ಒದಗಿಸಲಾಗುತ್ತಿದೆ.(ಬೆಂಗಳೂರು ನಿರಾಶ್ರಿತರ ಪರಿಹಾರ ಕೇಂದ್ರದ ನಿರಾಶ್ರಿತರಿಗೆ ಮಾತ್ರ ಇಸ್ಕಾನ್ ಸಂಸ್ಥೆಯ ಮುಖಾಂತರ ಆಹಾರ ಪೂರೈಸಲಾಗುತ್ತಿದೆ). ಇದರೊಂದಿಗೆ ವಾರಕ್ಕೆ 3 ಬಾರಿ ತಲಾ ಒಂದು ಕೋಳಿಮೊಟ್ಟೆ ಹಾಗೂ ಬಾಳೆಹಣ್ಣುಗಳನ್ನು ನೀಡಲಾಗುತ್ತಿದೆ.

- ನಿರಾಶ್ರಿತರಿಗೆ 3 ಜೊತೆ ಸಮವಸ್ತ್ರ, ಒಂದು ಸೆಟ್ ಹಾಸಿಗೆ-ಹೊದಿಕೆ, ಸೋಪು, ಎಣ್ಣೆ, ಹಲ್ಲುಪುಡಿ, ಇತ್ಯಾದಿಗಳನ್ನು ಒದಗಿಸಲಾಗುತ್ತಿದೆ. ಮಹಿಳಾ ನಿರಾಶ್ರಿತರಿಗೆ ಒಂದು ಬಾಚಣಿಗೆ ನೀಡಲಾಗುತ್ತಿದೆ. ಪ್ರತಿ ಡಾರ್ಮಿಟರಿಗಳಲ್ಲಿ ನಿರಾಶ್ರಿತರ ಉಪಯೋಗಕ್ಕಾಗಿ ಕನ್ನಡಿ, ಗೋಡೆ ಗಡಿಯಾರಗಳನ್ನು ಅಳವಡಿಸಲಾಗಿದೆ. ಹಾಗೂ ನಿರಾಶ್ರಿತರ ಬಿಸಿನೀರಿನ ಸ್ನಾನಕ್ಕಾಗಿ ಪ್ರತಿ ಡಾರ್ಮಿಟರಿಗಳಲ್ಲಿ ಸೋಲಾರ್‌ವಾಟರ್ ಹೀಟರ್‌ಗಳನ್ನು ಅಳವಡಿಸಲಾಗಿದೆ. ಬೆಂಗಳೂರು ನಿರಾಶ್ರಿತರ ಪರಿಹಾರ ಕೇಂದ್ರದಲ್ಲಿ ನಿರಾಶ್ರಿತರುಗಳ ಕ್ರೀಡೆ ಚಟುವಟಿಕೆಗಳಗಾಗಿ ಮಿನಿ ಸ್ಟೇಡಿಯಂ ನಿರ್ಮಾಣ ಮಾಡಲಾಗಿದ್ದು, ಇದರಲ್ಲಿ ನಿರಾಶ್ರಿತರುಗಳ ಲಘು ದೈಹಿಕ ವ್ಯಾಯಾಮಕ್ಕಾಗಿ ಔಟ್‌ಡೋರ್ ಜಿಮ್ ಉಪಕರಣಗಳನ್ನು ಅಳವಡಿಸಲಾಗಿದೆ.
- ನಿರಾಶ್ರಿತರುಗಳಿಗೆ ವೈದ್ಯಕೀಯ ಚಿಕಿತ್ಸೆಯನ್ನು ನೀಡಲಾಗುತ್ತಿದ್ದು, ಹೆಚ್ಚುವರಿ ಚಿಕಿತ್ಸೆ ಅವಶ್ಯಕತೆ ಇರುವ ನಿರಾಶ್ರಿತರನ್ನು ಇತರೇ ಸರ್ಕಾರಿ ಆಸ್ಪತ್ರೆಗಳಿಗೆ ದಾಖಲು ಮಾಡಲಾಗುತ್ತಿದೆ.
- ಬೆಂಗಳೂರು ನಿರಾಶ್ರಿತರ ಪರಿಹಾರ ಕೇಂದ್ರದ ಆವರಣದಲ್ಲಿ ಒಂದು ಪ್ರಾಥಮಿಕ ಆರೋಗ್ಯ ಘಟಕವು ಕಾರ್ಯನಿರ್ವಹಿಸುತ್ತಿದ್ದು, ಮೂವರು ವೈದ್ಯಾಧಿಕಾರಿಗಳು ಮತ್ತು ಐದು ಜನ ಸ್ಟಾಫ್ ನರ್ಸ್‌ಗಳಿದ್ದು, 24 ಗಂಟೆಗಳ ಕಾಲ ನಿರಾಶ್ರಿತರ ಆರೋಗ್ಯದ ಬಗ್ಗೆ ನಿಗಾ ವಹಿಸಲಾಗಿದೆ. ಮಾನಸಿಕ ಅಸ್ವಸ್ಥರಾಗಿರುವವರಿಗೆ ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯಿಂದ 30 ದಿನಕ್ಕೊಮ್ಮೆ ನುರಿತ ವೈದ್ಯರ ತಂಡ ಕೇಂದ್ರಕ್ಕೆ ಭೇಟಿ ನೀಡಿ ಅಗತ್ಯ ವೈದ್ಯಕೀಯ ಚಿಕಿತ್ಸೆ ನೀಡುತ್ತಿದೆ. ಹಾಗೂ ಹೆಚ್ಚಿನ ಚಿಕಿತ್ಸೆಗಾಗಿ ನಿರಾಶ್ರಿತರನ್ನು ಬೆಂಗಳೂರು ವಿಕ್ಟೋರಿಯಾ, ನಿಮ್ಹ್ಯಾನ್ಸ್, ಜಯದೇವ ಆಸ್ಪತ್ರೆಗಳಲ್ಲಿ ದಾಖಲಿಸಿ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. . ಉಳಿದ ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲೂ ಸಹ ಇದೇ ರೀತಿ ಸರ್ಕಾರಿ ಆಸ್ಪತ್ರೆಗಳಲ್ಲಿ ದಾಖಲಿಸಿ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.
- ಸದೃಢ ನಿರಾಶ್ರಿತರಿಗೆ ಸ್ವಾವಲಂಬಿಗಳಾಗಲು ಅನುಕೂಲವಾಗುವಂತೆ ತೋಟಗಾರಿಕೆ, ಬಡಗಿ, ಕೈಮಗ್ಗ, ತೆಂಗಿನನಾರಿನ ವಸ್ತುಗಳ ತಯಾರಿಕೆ, ಹೊಲಿಗೆ ತರಬೇತಿ, ಕವರ್ ಸಿದ್ಧಪಡಿಸುವಿಕೆ, ಪೈಲ್‌ರ್ಯಾಪರ್ ಸಿದ್ಧಪಡಿಸುವಿಕೆ, ಫೆನಾಯಿಲ್ ತಯಾರಿಕೆ. ಇತ್ಯಾದಿ ವೃತ್ತಿಗಳಲ್ಲಿ ನಿರಾಶ್ರಿತರ ಮನೋವಿಕಾಸ ಮತ್ತು ಪುನರ್ವಸತಿ ನಿಮಿತ್ತ ವಿವಿಧ ವೃತ್ತಿ ತರಭೇತಿಯನ್ನು ನೀಡಲಾಗುತ್ತಿದೆ.
- ಪ್ರತಿದಿನ ನಿರಾಶ್ರಿತರಿಗೆ ಸಾಕ್ಷರತೆ, ಗ್ರಂಥಾಲಯದಲ್ಲಿ ಅಭ್ಯಾಸದಲ್ಲಿ ತೊಡಗಿಸಲಾಗುತ್ತಿದೆ. ಹಾಗೂ ಬಯಲು ರಂಗಮಂದಿರದಲ್ಲಿ ಸಂಜೆವೇಳೆ ಸಾಮೂಹಿಕ ಮನರಂಜನಾ ಕಾರ್ಯಕ್ರಮಕ್ಕೆ ಅವಕಾಶ ಕಲ್ಪಿಸಿದೆ. ಎಲ್ಲಾ ಕೇಂದ್ರಗಳಲ್ಲಿ ಮನರಂಜನೆಗಾಗಿ ಟಿ.ವಿ ಗಳನ್ನು ಅಳವಡಿಸಲಾಗುತ್ತದೆ.
- ಹೆಚ್ಚಿನ ಭಿಕ್ಷುಕರು/ನಿರಾಶ್ರಿತರುಗಳಿಗೆ ಸ್ಥಳಾವಕಾಶ ಕಲ್ಪಿಸಲು ಮೂಲಭೂತ ಸೌಕರ್ಯಗಳಾದ ಹೆಚ್ಚುವರಿ ಡಾರ್ಮಿಟರಿಗಳ ನಿರ್ಮಾಣ, ಮಿನಿಹೆಲ್ತ್‌ಕ್ಲಿನಿಕ್, ಅಡಿಗೆಮನೆ ಮತ್ತು ಡೈನಿಂಗ್‌ಹಾಲ್‌ಗಳ ನಿರ್ಮಾಣ, ಸಂಪರ್ಕ ರಸ್ತೆಗಳ ನಿರ್ಮಾಣ, , ಕ್ಷೌರಿಕ ಕೊಠಡಿಗಳು, ಹಾಗೂ ಕಾಂಪೌಂಡ್ ಗೋಡೆಗಳ ನಿರ್ಮಾಣ, ನೀರು ಸರಬರಾಜು & ಒಳಚರಂಡಿ ಸಂಪರ್ಕ ಕಲ್ಪಿಸುವುದು ಇತ್ಯಾದಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಿರಾಶ್ರಿತರಿಗೆ ಉತ್ತಮ ಸೌಕರ್ಯ ಕಲ್ಪಿಸುವ ಉದ್ದೇಶಕ್ಕಾಗಿ ಕೈಗೊಳ್ಳಲಾಗಿದೆ.

**2016-17 ನೇ ಸಾಲಿನಲ್ಲಿ ಭಿಕ್ಷುಕರ ಉಪ ಕರದ ಸ್ವೀಕೃತಿ ಮತ್ತು ವೆಚ್ಚದ ವಿವರಗಳು:-**

2016-17 ನೇ ಸಾಲಿನ 31-01-2017 ರ ಅಂತ್ಯಕ್ಕೆ ಕೇಂದ್ರ ಪರಿಹಾರ ಸಮಿತಿಗೆ ವಿವಿಧ ಸ್ಥಳೀಯ ಸಂಸ್ಥೆಗಳಿಂದ ವಸೂಲಾದ ಭಿಕ್ಷುಕರ ಉಪಕರದ ಸ್ವೀಕೃತಿ, ಹಾಗೂ ಕೇಂದ್ರ ಪರಿಹಾರ ಸಮಿತಿ ಮತ್ತು 14 ನಿರಾಶ್ರಿತರ ಪರಿಹಾರ ಕೇಂದ್ರಗಳ ಆಡಳಿತ ನಿರ್ವಹಣೆಗಾಗಿ ವೆಚ್ಚ ಮಾಡಲಾದ ವಿವರಗಳು ಈ ಕೆಳಕಂಡಂತಿರುತ್ತವೆ.

**(ರೂ.ಲಕ್ಷಗಳಲ್ಲಿ)**

| | |
|---|---|
| ಸ್ವೀಕೃತಿ (01-04-2016 ರಿಂದ 31-01-2017 ರವರೆಗೆ | 2700.59 |
| ವೆಚ್ಚ (01-04-2016 ರಿಂದ 31-01-2017 ರವರೆಗೆ) | 8041.77 |

**ಕಾರ್ಯಕ್ರಮವಾರು ವೆಚ್ಚದ ವಿವರಗಳು(31-01--2017 ಅಂತ್ಯಕ್ಕೆ)**

| ಕ್ರ.ಸಂ | ವಿವರ | ವೆಚ್ಚ ರೂ.(ಲಕ್ಷಗಳಲ್ಲಿ) |
|---|---|---|
| 1 | ನಿರ್ದೇಶನ ಮತ್ತು ಆಡಳಿತ | 271.21 |
| 2 | ಸಾದಿಲ್ವಾರು ವೆಚ್ಚಗಳು | 246.17 |
| 3 | ಕಟ್ಟಡಗಳ ವಿದ್ಯುತ್‌ಚ್ಛಕ್ತಿ / ನೀರಿನ ನಿರ್ವಹಣೆ | 21.48 |
| 4 | ಸಾರಿಗೆ ವೆಚ್ಚಗಳು | 37.62 |
| 5 | ನಿರಾಶ್ರಿತರ ಸಮವಸ್ತ್ರ, ಹಾಸಿಗೆ ಹೊದಿಕೆ ಖರೀದಿ | 113.08 |
| 6 | ನಿರಾಶ್ರಿತರ ನಿರ್ವಹಣೆ | 406.81 |
| 7 | ನಿರಾಶ್ರಿತರ ತರಭೇತಿ/ ಪುನರ್ವಸತಿ | 19.76 |
| 8 | ಅಭಿವೃದ್ಧಿ ನಿರ್ವಹಣೆ | 236.40 |
| 9 | ಅಭಿವೃದ್ಧಿ ಕಾಮಗಾರಿಗಳು | 6691.26 |
| | **ಒಟ್ಟು** | **8041.77** |

**ಕೇಂದ್ರ ಪರಿಹಾರ ಸಮಿತಿ ಆಡಳಿತದ ವ್ಯಾಪ್ತಿಗೊಳಪಡುವ 14 ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ 2016-17 ನೇ ಸಾಲಿನಲ್ಲಿ ನಿರಾಶ್ರಿತರ ವಿವರಗಳ ಅಂಕಿ-ಅಂಶ**

| ಕ್ರ.ಸಂ | ನಿರಾಶ್ರಿತರ ಪರಿಹಾರ ಕೇಂದ್ರಗಳು | 1-4-2016 ರಲ್ಲಿ ಇದ್ದ ನಿರಾಶ್ರಿತರ ಸಂಖ್ಯೆ | 01.04.2016 ರಿಂದ 31.01.2017 ರವರೆಗೆ ಬಂಧಿಸಲಾದ ಭಿಕ್ಷುಕರ ಸಂಖ್ಯೆ | ಒಟ್ಟು ನಿರಾಶ್ರಿತರ ಸಂಖ್ಯೆ | 01.04.2016 ರಿಂದ 31.01.2017 ರವರೆಗೆ ಬಿಡುಗಡೆ ಯಾದ ನಿರಾಶ್ರಿತರ ಸಂಖ್ಯೆ | 31-01-2017 ರಂದು ಇದ್ದ ನಿರಾಶ್ರಿತರ ಸಂಖ್ಯೆ |
|---|---|---|---|---|---|---|
| 1 | ಬೆಂಗಳೂರು | 640 | 1120 | 1760 | 1262 | 498 |
| 2 | ಬಿಜಾಪುರ | 104 | 358 | 462 | 302 | 160 |

| | | | | | | |
|---|---|---|---|---|---|---|
| 3 | ಬಳ್ಳಾರಿ | 127 | 326 | 453 | 310 | 143 |
| 4 | ಬೆಳಗಾವಿ | 90 | 117 | 207 | 105 | 102 |
| 5 | ಚಿತ್ರದುರ್ಗ | 196 | 205 | 401 | 176 | 223 |
| 6 | ದಾವಣಗೆರೆ | 83 | 301 | 384 | 291 | 93 |
| 7 | ಗುಲ್ಬರ್ಗ | 34 | 345 | 379 | 327 | 52 |
| 8 | ಧಾರವಾಡ | 185 | 187 | 372 | 214 | 158 |
| 9 | ಕೋಲಾರ | 55 | 153 | 208 | 152 | 56 |
| 10 | ಮೈಸೂರು | 402 | 655 | 1057 | 673 | 384 |
| 11 | ಮಂಗಳೂರು | 110 | 72 | 182 | 78 | 104 |
| 12 | ರಾಯಚೂರು | 75 | 121 | 196 | 121 | 75 |
| 13 | ಶಿವಮೊಗ್ಗ | 98 | 91 | 189 | 87 | 102 |
| 14 | ತುಮಕೂರು | 164 | 191 | 355 | 169 | 186 |
| | **ಒಟ್ಟು** | **2363** | **4242** | **6605** | **4269** | **2336** |

**14 ನಿರಾಶ್ರಿತರ ಪರಿಹಾರ ಕೇಂದ್ರಗಳ ಸ್ಥಿರಾಸ್ಥಿ ವಿವರ:-**

| **ಕ್ರ.ಸಂ** | **ನಿರಾಶ್ರಿತರ ಪರಿಹಾರ ಕೇಂದ್ರಗಳು** | **ಜಮೀನು/ ನಿವೇಶನ(ಎಕರೆಗಳಲ್ಲಿ)** |
|---|---|---|
| 1 | ಬೆಂಗಳೂರು | 222.36 |
| 2 | ವಿಜಾಪುರ | 4.00 |
| 3 | ಬಳ್ಳಾರಿ | 2.00 |
| 4 | ಬೆಳಗಾವಿ | 21.27 |
| 5 | ಚಿತ್ರದುರ್ಗ | 10.00 |
| 6 | ದಾವಣಗೆರೆ | 10.00 |
| 7 | ಕಲ್ಬುರ್ಗಿ | 4.00 |
| 8 | ಧಾರವಾಡ | 10.00 |
| 9 | ಕೋಲಾರ | 23.15 |
| 10 | ಮೈಸೂರು | 10.31 |
| 11 | ಮಂಗಳೂರು | 2.00 |
| 12 | ರಾಯಚೂರು | 10.00 |
| 13 | ಶಿವಮೊಗ್ಗ | 29.00 |
| 14 | ತುಮಕೂರು | 4.00 |

ಕಾರ್ಯದರ್ಶಿ
ಕೇಂದ್ರ ಪರಿಹಾರ ಸಮಿತಿ
ಬೆಂಗಳೂರು